**ದಿನಾಂಕಃ 18-08-2023** **OS NO.79/2020(ಪಾಟೀ ಸವಾಲು ಪಿ.ಡಬ್ಲ್ಯು.1)**

**ಇಂದು ದಿನಾಂಕಃ 18-08-2023 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರವಾಗಿ ಶ್ರೀ ಜೆ.ಪಿ.ಎ. ವಕೀಲರಿಂದಃ-**

ನಾನು ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ್ಯ ಮಾಡಿದ್ದೇನೆ. ನನ್ನ ತಂದೆಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ನನ್ನ ತಂದೆಯ ಒಂದನೆ ಹೆಂಡತಿಗೆ ಮೂರು ಮಕ್ಕಳು ಮತ್ತು ಎರಡನೆ ಹೆಂಡತಿಗೆ ಮೂರು ಮಕ್ಕಳು ಇರುತ್ತಾರೆ. ನನ್ನ ವಾದ ಪತ್ರದಲ್ಲಿ 1 ನೇ ಹಾಗೂ 2 ನೇ ಹೆಂಡತಿಯ ಹೆಣ್ಣು ಮಕ್ಕಳಿಗೆ ತೋರಿಸಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಮಲ್ಲಿಕಾರ್ಜುನ ರವರ ಹೆಂಡತಿ ಮಕ್ಕಳಿಗೂ ಸಹ ವಾದ ಪತ್ರದಲ್ಲಿರುವ ವಂಶಾವಳಿಯಲ್ಲಿ ತೋರಿಸಿಲ್ಲ ಎಂದರೆ ಸರಿ. ನಮ್ಮ ಮಧ್ಯ ಹಾಗೂ ನಮ್ಮ ತಂದೆಯ

ಮಧ್ಯ ಪಾಲು ಆಗಿದೆ. 1985-86 ರಲ್ಲಿ ಪಾಲು ಮಾಡಿಕೊಂಡಿರುತ್ತೇವೆ. ಒಂದು ಬಾರಿ ಪಾಲು ಮಾಡಿಕೊಂಡಿರುತ್ತೇವೆ. ಸದರಿ ಪಾಲುಗಾರಿಕೆಯನ್ನು ಸ.ನಂ. 72 ರಲ್ಲಿರುವ 08 ಎಕರೆ ಜಮೀನು ಮಲ್ಲಿಕಾರ್ಜುನ ರವರಿಗೆ ಬಂದಿರುತ್ತದೆ. ಸ.ನಂ. 72 ರಲ್ಲಿ 05 ಎಕರೆ ಜಮೀನು ಪ್ರತಿವಾದಿಗೆ ಬಂದಿರುತದೆ. ಸ.ನಂ. 70 ರಲ್ಲಿ 02 ಎಕರೆ 20 ಗುಂಟೆ ಜಮೀನು ಪ್ರತಿವಾದಿಗೆ ಬಂದಿರುತದೆ. ಸ.ನಂ. 5/5 ರಲ್ಲಿ 06 ಎಕರೆ ಜಮೀನು ನನ್ನ ಹಿಸ್ಸೆಗೆ ಬಂದಿರುತ್ತದೆ. ಸ.ನಂ. 5/1 ರಲ್ಲಿ 02 ಎಕರೆ 36 ಗುಂಟೆ ಜಮೀನು ಮಹೇಂದ್ರರವರಿಗೆ ಬಂದಿರುತ್ತದೆ. ಸ.ನಂ. 4 ರಲ್ಲಿ 03 ಎಕರೆ ಜಮೀನು ಮಹೇಂದ್ರರವರಿಗೆ ಬಂದಿರುತ್ತದೆ. ಸ.ನಂ. 4 ರಲ್ಲಿ 06 ಎಕರೆ ಜಮೀನು, ಸ.ನಂ. 52 ಅಥವಾ 54 ರಲ್ಲಿ 06 ಎಕರೆ ಜಮೀನು, ಸ.ನಂ. 64 ರಲ್ಲಿ 05 ಎಕರೆ ಜಮೀನು ನನ್ನ ತಂದೆ ತಾಯಿಗೆ ಬಿಟ್ಟುಕೊಟ್ಟಿರುತ್ತೇವೆ. ಸ.ನಂ. 4 ರಲ್ಲಿ ಯಾವದೇ ಜಮೀನು ಪ್ರತಿವಾದಿಗೆ ಬಂದಿರುವುದಿಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿಯ ಹೆಸರಿನಲ್ಲಿ ಇರುವ ಜಮೀನು ನಮ್ಮ ತಂದೆಗೆ ಬಂದಿದ್ದು ಎಂದು ನುಡಿಯುತ್ತಾರೆ. ಸ.ನಂ. 4 ರಲ್ಲಿ 15 ಎಕರೆ ನನ್ನ ತಂದೆಗೆ ಬಿಟ್ಟುಕೊಟ್ಟಿರುತ್ತೇವೆ. ಸ.ನಂ. 4 ರಲ್ಲಿರುವ 15 ಎಕರೆ ಜಮೀನು ನನ್ನ ತಂದೆ ಮೃತಪಟ್ಟ ಮೇಲೆ ಯಾರು ಹಂಚಿಕೊಂಡಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಹಂಚಿಕೊಂಡಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆ ಮೃತಪಡುವಗಿಂತ ಮುಂಚೆ ಸ.ನಂ. 4 ರಲ್ಲಿರುವ ಜಮೀನು ಪ್ರತಿವಾದಿಯ ಹೆಸರಿನಲ್ಲಿ ಇತ್ತು. ಆ ಕಾಲಕ್ಕೆ ಪ್ರತಿವಾದಿ ನಾಬಾಲಿಕನಿದ್ದ. ಸ.ನಂ. 4 ರಲ್ಲಿ 5 ಎಕರೆ ಜಮೀನು ಪ್ರತಿವಾದಿ ನಾಬಾಲಕನಿದ್ದಾಗ ಅವನ ಹೆಸರಿನಲ್ಲಿ ಇತ್ತು. 1988-89 ರಿಂದ ಸ.ನಂ. 4 ರಲ್ಲಿರುವ 5 ಎಕರೆ ಜಮೀನು ಪ್ರತಿವಾದಿಯ ಹೆಸರಿನಲ್ಲಿ ಆಗಿರುತ್ತದೆ. ಉಳಿದ 9 ಎಕರೆ ಯಾರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿ 8 ಎಕರೆ ಜಮೀನು ನನ್ನ ತಂದೆ ಮಾರಾಟ ಮಾಡಿರುತ್ತಾರೆ. ಉಳಿದ 01 ಎಕರೆ 39 ಗುಂಟೆ ನನ್ನ ಹೆಸರಿನಲ್ಲಿ ಇದೆ. ಸದರಿ 1 ಎಕರೆ 39 ಗುಂಟೆ ನನ್ನ ಹೆಸರಿಗೆ ಹೇಗೆ ಬಂತು ಎಂದು ಪ್ರಶ್ನಿಸಿದಾಗ ನನ್ನ ತಾಯಿಂದ ಬಂದಿದೆ ಎಂದು ನುಡಿಯುತ್ತಾರೆ. ಸದರಿ 1 ಎಕರೆ 39 ಗುಂಟೆ ಜಮೀನು ನನ್ನ ಮೃತಪಟ್ಟ ಮೇಲೆ ನನ್ನ ತಾಯಿಯ ಹೆಸರಿನಲ್ಲಿ ಬಂದಿದೆ ಎಂದರೆ ಸರಿ. ಸ.ನಂ. 5 ಎಕರೆ ಜಮೀನು ಪ್ರತಿವಾದಿಯ ಹೆಸರಿನಲ್ಲಿ ಆಗಿ 15-20 ವರ್ಷಗಳ ಕಾಲ ಜೀವಂತ ಇದ್ದರು ಎಂದರೆ ಸರಿ. ಸದರಿ 5 ಎಕರೆ ಜಮೀನು ಪ್ರತಿವಾದಿಯ ಹೆಸರಿನಲ್ಲಿ ಆಗಿದ ಕಾರಣ ನಾನು ಸದರಿ ವರ್ಗಾವಣೆಯ ವಿರುದ್ದ ಅರ್ಜಿಯನ್ನು ಸಲ್ಲಿಸಿದ್ದೇನೆ. 2020-23 ರಲ್ಲಿ ಅರ್ಜಿಯನ್ನು ಸಲ್ಲಿಸಿದ್ದೇನೆ. ನಾಬಾಲಿಕ ಪ್ರತಿವಾದಿ

ಹೆಸರಿನಲ್ಲಿ ವರ್ಗಾವಣೆ ಆದಕಾರಣ ನಾನು ಸದರಿ ವರ್ಗಾವಣೆಯ ವಿರುದ್ದ ಅರ್ಜಿಯನ್ನು ಸಲ್ಲಿಸಿಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಜೀವಂತ ಇರುವ ಕಾರಣ ಅರ್ಜಿಯನ್ನು ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ.

ಪಾಲುಗಾರಿಕೆಯಾದಾಗ ನಾನು ನಾಬಾಲಿಕನಿದ್ದೆ. ನಾನು ನನ್ನ ತಂದೆಗೆ ಸದರಿ ವರ್ಗಾವಣೆ ರದ್ದು ಗೋಳಿಸಲು ಹೇಳಿಲ್ಲ. ನಮ್ಮ ಕುಟುಂಬದಲ್ಲಿ ಪಾಲು ಆದಂತೆ ತಮ್ಮ ತಮ್ಮ ಹೆಸರಿನಲ್ಲಿ ವರ್ಗಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 5 ಎಕರೆ ಜಮೀನು ನಾವು ಒಟ್ಟಿನಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ ನಾವು ಒಟ್ಟಿನಲ್ಲಿ ಇದ್ದೇವೆ ಎಂದು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿದ್ದೇನೆ. ಸದರಿ ಜಮೀನು ನಾವು ಒಟ್ಟಿನಲ್ಲಿ ಇದ್ದೇವೆ ಎಂದು ಯಾವ ದಾಖಲೆ ಹಾಜರುಪಡಿಸಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ದಾವಾ ಜಮೀನು ನಮ್ಮ ತಂದೆ ತಾಯಿ ಮೃತಪಟ್ಟ ಮೇಲೆ ಎಲ್ಲ ಅಣ್ಣ ತಮ್ಮಂದಿರ ಹೆಸರಿನ ಮೇಲೆ ಬರಬೇಕು ಎಂದು ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿ. ದಾವಾ ಜಮೀನಿನಲ್ಲಿ ನನಗೆ ಒಂದು ಪಾಲು ಬರಬೇಕು ಎಂದು ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿ. ಸದರಿ ದಾವೆ ನನಗೆ ಪಾಲು ಬರಬೇಕು ಎಂದು ಹಾಕಿಲ್ಲ ಹಾಗೂ ದಾವಾ ಜಮೀನಿನಲ್ಲಿ ನಾನು ಅರ್ಧ ಹಿಸ್ಸೆಯಲ್ಲಿ ಈಗಾಗಲೆ ಮಾಲೀಕನಾಗಿ ಇದ್ದೆನೆ ಎಂದು ಘೋಷಿಸಲು ಹೂಡಿದ್ದೇನೆ ಎಂದರೆ ಸಾಕ್ಷಿ ದಾವಾ ಜಮೀನಿನಲ್ಲಿ ಅರ್ಧ ಪಾಲು ಬರಬೇಕು ಎಂದು ಈ ದಾವೆಯನ್ನು ಹೂಡಿದ್ದೇನೆ ಎಂದು ನುಡಿಯುತ್ತಾರೆ. ಅರ್ಧ ಪಾಲು ಎಂದರೆ ನನ್ನ ಮತ್ತು ನನ್ನ ತಮ್ಮನಾದ ಮಹೇಂದ್ರರವರಿಗೆ ಅರ್ಧ ಪಾಲು ಬರಬೆಕೆಂದು ಹೂಡಿದ್ದೇನೆ. ಉಳಿದ ಅರ್ಧ ಪಾಲು ಪ್ರತಿವಾದಿ ಮತ್ತು ಮಲ್ಲಿಕಾರ್ಜುನ ರವರಿಗೆ ಹೋಗಬೇಕು.

ಪ್ರತಿವಾದಿ ಪ್ರಾಪ್ತ ವಯಸ್ಕ ಆಗಿದ ಕಾರಣ ನಾಬಾಲಿಕ ಇಲ್ಲ ಎಂದು ಕಾಳಗಿ ತಹಸೀಲ್ದಾರರವರಿಗೆ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿ ತಮಗೆ ಅವಶ್ಯಕತೆ ಇರುವ ಕಾರಾಣ ಸದರಿ ಅರ್ಜಿಯನ್ನು ಸಲ್ಲಿಸಿ ಮಾರಾಟ ಮಾಡಲು ಮುಂದಾಗಿದ್ದರು ಎಂದರೆ ಸರಿ. ಸದರಿ ಅರ್ಜಿಗೆ ನಾನು ತಕರಾರು ಹಾಕಿದ್ದೇನೆ ಎಂದರೆ ಸರಿ. ಸದರಿ ತಕರಾರಿನಲ್ಲಿ ಮೇಲೆ ಹೇಳಿರುವ ಜಮೀನು ನಮ್ಮ ತಂದೆ ತಾಯಿಗೆ ಬಿಟ್ಟಿರುವದಾಗಿ ಮತ್ತು ಎಲ್ಲ ಅಣ್ಣತಮ್ಮಂದಿಗೆ ಸೇರಿದ್ದು ಎಂದು

ತಕರಾರು ಹಾಕಿದ್ದೇನೆ. ಪ್ರತಿವಾದಿಗೆ ಸತಾಯಿಸಲು ತಕರಾರು ಹೂಡಿದರೂ ಸಹ ಈ ದಾವೆಯಲ್ಲಿ ನನಗೆ ಅರ್ಧ ಪಾಲು ಬಂದಿದೆ ಎಂದು ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈಗ ನೋಡುತಿರುವ ತಕರಾರು ನಾನೇ ಹಾಕಿದ್ದು ಅದನ್ನು ನಿ.ಡಿ-1 ಎಂದು ಗುರುತಿಸಲಾಯಿತು. ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಡಿ-1 (ಎ) ಎಂದು ಗುರುತಿಸಲಾಯಿತು. ನಿ.ಡಿ -1 ರ ತಕರಾರಿನಲಿ ದಾವಾ ಜಮೀನು ನಮ್ಮ ತಂದೆ ತಾಯಿಗೆ ಬಿಟ್ಟಿದ್ದು ಎಂದು ಉಲ್ಲೇಖ ಮಾಡಿಲ್ಲ ಎಂದರೆ ಸರಿ. ಸದರಿ ತಹಸೀಲ್ದಾರರವರು ನನ್ನ ತಕರಾರು ತಿರಸ್ಕರಿಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ತಹಸೀಲ್ದಾರರವರ ಮುಂದೆ ದಿನಾಂಕಃ 27-02-2020 ರಂದು ಆದೇಶಕ್ಕಾಗಿ ಕಾಯ್ದಿರಿಸಲಾಗಿದ್ದು ನಂತರ ಆದೇಶ ಸಹ ಆಗಿದೆ ಎಂದರೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿಗೆ ಸತಾಯಿಸಲು ಮತ್ತು ಪ್ರತಿವಾದಿರವರಿಂದ ಹೇಗಾದರೂ ಮಾಡಿ ಜಮೀನಿನ್ನು ಪಡೆಯಬೇಕೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಜಮೀನಿನ ಮಾಲೀಕ ಮತ್ತು ಕಬ್ಜೆದಾರರು ಪ್ರತಿವಾದಿಯೇ ಇರುತ್ತಾರೆ ಎಂದರೆ ಸರಿಯಲ್ಲ. ಸ.ನಂ. 72 ರಲ್ಲಿರುವ 04 ಎಕರೆ 39 ಗುಂಟೆ ಜಮೀನು ಪ್ರತಿವಾದಿ ಪಾಲಿಗೆ ಬಂದಿದೆ ಎಂದರೆ ಸರಿ. ಸ.ನಂ. 4/1 ರಲ್ಲಿ 5 ಎಕರೆ ಜಮೀನು (ದಾವಾ ಜಮೀನು) ಪ್ರತಿವಾದಿರವರ ಪಾಲಿಗೆ ಬಂದಿದೆ ಎಂದರೆ ಸರಿಯಲ್ಲ. ನಮ್ಮ ತಂದೆ ಆಸ್ತಿಯಲ್ಲಿ ನನ್ನ ತಂಗಿಗಾಗಲಿ ಅಥವಾ ಪ್ರತಿವಾದಿಯ ತಂಗಿಗಾಗಲಿ ಪಾಲು ಕೊಟ್ಟಿಲ್ಲ ಎಂದರೆ ಸರಿ. ನನ್ನ ತಮ್ಮ ಮಹೇಂದ್ರರವರ ಹೆಸರಿಗೂ ಸಹ ನಾಬಾಲಿಕ ಎಂದು ವರ್ಗವಣೆ ಆಗಿದೆ ಎಂದರೆ ಸರಿ. ನಿಪಿ-1 ರ ಪ್ರಕಾರ 2011 ರಲ್ಲಿ ದಾವಾ ಜಮೀನು ವಿಭಜನ ಆಗಿದೆ ಎಂದರೆ ಸರಿ. ಈಗ ಪ್ರತಿವಾದಿ ಕಲಬುರಗಿಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಪ್ರತಿವಾದಿಗೆ ದಾವಾ ಜಮೀನು ಬಿಟ್ಟು ಬೇರೆ ಯಾವದು ಆದಾಯ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಖಾಸಗಿ ಯಾವದೋ ಕೆಲಸ ಮಾಡುತ್ತಾರೆ. ಪ್ರತಿವಾದಿ ತನ್ನ ತಂಗಿಗೆ ಮದುವೆ ಮಾಡಿಕೊಟ್ಟು ಸಾಲ ಮಾಡಿಕೊಂಡಿದ ಕಾರಣ ಪ್ರತಿವಾದಿಗೆ ಸತಾಯಿಸಬೇಕೆಂದು ನನಗೆ ಅರ್ಧ ಪಾಲು ಬಂದಿದೆ ಎಂದು ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನಿಗೂ ಹಾಗೂ ನನಗೆ, ನನ್ನ ತಮ್ಮನಿಗೆ ಹಾಗೂ ವಾದಿಯ ಅಣ್ಣನ ಹೆಂಡತಿ ಮತ್ತು ಮಕ್ಕಳಿಗೆ ಯಾವದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲಾ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಚಿಂಚೋಳಿ